ಬಡ್ಡಿ ಸೇರಿ ತುತ್ತತುದಿ ಮುಟ್ಟನಿಂತೈತಿ. ನೀನಂತೂ ಇಲ್ಲೀಮಟ ಮಳೀ ಆಗಿಲ್ಲ, ಬರ ಬಿದ್ದೈತಿ, ಮಕ್ಳ ಓದು ಅಂತೆಲ್ಲ ಹೇಳಕೊಂತ ಬಂದಿ. ಈಗ ನಂಗೂ ರೊಕ್ಕದ ಹರಕತ್ತು ಭಾಳ ಐತಿ. ನೀ ಏನ ಮಾಡ್ತಿಯೋ ಗೊತ್ತಿಲ್ಲ, ನಾಳಿ ನನ್ನ ರೊಕ್ಕಕ್ಕ ಏನಾರ ವ್ಯವಸ್ಥಾ ಮಾಡು' ಎಂದು ಕಡ್ಡಿ ಮುರಿದಂತೆ ಹೇಳಿದ್ದ.

'ಇಲ್ಲರೀ ಧಣ್ಯಾರ, ನಾ ನಿಮ್ಮ ರೊಕ್ಕಾ ಇಟಗೊಂಗಿಲ್ಲ. ಹೆಂಗಾರ ಮಾಡಿ ಕೊಡ್ತೇನಿ. ನೀವ ನೋಡಾಕತ್ತೀರಿ, ಎರ್ಡ ವರ್ಷಾ ಆತು. ಮಳೀ ಇಲ್ಲ, ಬೆಳಿ ಇಲ್ಲ. ಭಾಳ ತೊಂದ್ರಿ ಐತ್ರೀ ಯಪ್ಪಾ. ದೊಡ್ಡ ಮನ್ಸ ಮಾಡಿ ಇನ್ನೂ ಒಸಿ ದಿನಾ ತಡ್ಕೊರಿ' ಅಂತ ಹೇಳುವಷ್ಟರಲ್ಲಿ ಗೌಡ, 'ನಂದು, ಒಂದ ಮಾತ, ನಾಳಿ ರೊಕ್ಕ ಬೇಕಂದ್ರ ಬೇಕ, ಇಲ್ಲಾ ಹೊಲ ನನ್ನ ಹೆಸರೀಲಿ ಬರದ ಕೊಡ' ಅಂತ ಹೇಳಿ ಕೆಂಚಪ್ಪನನ್ನು ಬೆದರಿಸಿ ಕಳಿಸಿದ್ದ.

ಬಸಾಪೂರದಲ್ಲಿ ಇದ್ದ ತನ್ನ ಸಂಬಂಧಿಕರ ಹತ್ತಿರ, ಸುತ್ತಮುತ್ತಲಿನ ಗ್ರಾಮದ ಪರಿಚಿತರ ಬಳಿ 'ಈ ಸಲ ಮಳಿ ಏನಾದ್ರೂ ಕೈಹಿಡಿತಂದ್ರ ನಿಮ್ಮ ದುಡ್ಡು ಕೊಟ್ಟ ಬಿಡತೇನ್ರೀ ಯಪ್ಪಾ, ಹೆಂಗಾರ ಮಾಡಿ ಗೌಡನ ಸಾಲ ತೀರಿಸೂ ಹಂಗ ಮಾಡ್ರೀ ಯಪ್ಪಾ' ಎಂದು ದುಡ್ಡಿಗಾಗಿ ಅಂಗಲಾಚಿದ, ಗೋಗರೆದ. ಎಲ್ಲಿಯೂ ಒಂದು ಚಿಕ್ಕಾಸೂ ಹುಟ್ಟಲಿಲ್ಲ. ಇದೇ ಚಿಂತೆಯಲ್ಲಿ ರಾತ್ರಿ ಊಟಕ್ಕೆ ಪಾರವ್ವ ಕರೆದರೂ 'ನಂಗ ಹಸಿವಿಲ್ಲ, ನೀನು ಮಕ್ಕಳು ಉಣ್ಕೊಳ್ಳಿ' ಎಂದು ಮಲಗಲು ಅಣಿಯಾಗಿದ್ದ.

ಸರಿರಾತ್ರಿಯಲ್ಲಿ ಮಗ್ಗಲು ಬದಲಾಯಿಸುತ್ತಿದ್ದ ಕೆಂಚಪ್ಪನನ್ನು ಪಾರವ್ವ ಪ್ರಶ್ನೆ ಮಾಡಿದಳು.

'ಯಾಕ ಹಿರಿಯ, ಮುಂಜಾನಿಂದ ಯಾಕೋ ಒಂಥರಾ ಆಡಾಕತ್ತೀ... ಊಟಕ್ಕ ಕರದ್ರನೂ ಬರಲಿಲ್ಲ, ನಿದ್ದಿನೂ ಮಾಡವಲ್ಲಿ. ಮೈಯಾಗ ಹುಷಾರಿಲ್ಲೇನು? ಅದೇನಾಗೈತಿ ಅಂಥಾದ್ದು ಹೇಳರ ಹೇಳು. ಹೀಂಗ ಗರ ಬಡದವನಂಗ ಕುಂತ್ರ ನಾ ಏನ ತಿಳ್ಕೋಬೇಕ' ಬೋರೆಗೌಡನ ಮನೆಯಲ್ಲಿ, ಸೇರಿದ ಊರ ಜನರ ಮುಂದೆ ನಡೆದ ಎಲ್ಲ ಘಟನೆಯನ್ನು ಕೆಂಚಪ್ಪ ಸವಿಸ್ತಾರವಾಗಿ ಪಾರವ್ವನಿಗೆ ಹೇಳಿದ. ಅದನ್ನು ಮೈಯೆಲ್ಲ ಕಿವಿಯಾಗಿಸಿ ಕೇಳಿದ ಪಾರವ್ವ ದಂಗು ಬಡಿದವರಂತೆ ಕುಳಿತಳು. ಮುಂದೆ ಏನು ಮಾಡಬೇಕು ಎಂಬುದು ಇಬ್ಬರಿಗೂ ತೋಚಲಿಲ್ಲ. ಬದುಕಿಗೆ ಆಸರೆ ಅಂದರೆ ಈ ಪುಟ್ಟ ಜಮೀನು ಮಾತ್ರ. ಈಗ ಅದರ ಮೇಲೂ ಬೋರೆಗೌಡನ ಕೆಟ್ಟ ದೃಷ್ಟಿ ಬಿದ್ದು ಅದೂ ಈಗ ಕೈತಪ್ಪಿ ಹೋಗುವ ಆತಂಕ ಇದಿರಾಗಿತ್ತು. ನಾಳೆ ಏನಾಗುತ್ತೋ ನೋಡೋಣ ಎಂದು ಊರ ದೇವರಾದ ಬಸವಣ್ಣನ ಮೇಲೆ ಭಾರ ಹಾಕಿ ಮಲಗೋ ಪ್ರಯತ್ನ ಮಾಡಿದರು.



ಮಾರನೇ ದಿನ ಬೋರೆಗೌಡನ ಮನೆಯಲ್ಲಿ ಕೆಂಚಪ್ಪನ ಸಾಲ ವಸೂಲಾತಿಯ ಕುರಿತು ಪಂಚಾಯಿತಿ ಶುರುವಾಯಿತು. ಬೋರೆಗೌಡನ ಸುತ್ತ, ಅವನ ಮಾತಿಗೆಲ್ಲ ತಲೆಯಲ್ಲಾಡಿಸಲು ಊರ ಐನೋರು, ಊರಿಗೇ ಬೆಂಕಿ ಇಟ್ಟು ಮೈ ಕಾಸಿಕೊಳ್ಳುವ ಶ್ಯಾನುಭೋಗರು, ಬಿಟ್ಟಿಕಾಸಿಗೆ ಹಲ್ಲುಗಿಂಜುತ್ತಾ ಮೂರೂ ಬಿಟ್ಟು ನಿಂತ ಪರಮೇಶಿ, ಹೀಗೆ ಗೌಡನಿಗೆ ನಿಷ್ಠವಾದ ಪಟಾಲಮ್ಮು, ಬಡಪಾಯಿ ಕೆಂಚಪ್ಪನ ತುಂಡು ಹೊಲ ನುಂಗಿ ನೀರು ಕುಡಿಯಲು ಪ್ಲಾನು ಮಾಡಿ ಹೊಂಚು ಹಾಕಿ ಕೂತಿದ್ದರು.

ಕೆಂಚಪ್ಪ ಮತ್ತು ಪಾರವ್ವ ತಲೆ ತಗ್ಗಿಸಿಕೊಂಡು, ಹೊಲದ ಮೇಲಿನ ಆಸೆಯನ್ನು ಸಂಪೂರ್ಣ ಕೈಬಿಟ್ಟು, ಮೈಯೆಲ್ಲಾ ಹಿಡಿಯಾಗಿಸಿಕೊಂಡು 'ಏನು ಹೇಳುವರೋ?' ಎಂದು ದಯನೀಯವಾಗಿ ನಿಂತಿದ್ದರು. ಊರಿನ ಹಿರಿಯರು, ಪ್ರಮುಖರು ಪಂಚಾಯಿತಿ ಕೇಳಲು ಕಾತುರರಾಗಿದ್ದರು. ಅಷ್ಟರಲ್ಲಿ ಐನೋರು ಮಾತು ಪ್ರಾರಂಭಿಸಿದರು.

'ಕೆಂಚಪ್ಪ ನೀನು ಈ ಹಿಂದಕ ಧನ್ಯಾರ ಕಡೆ ಸಾಲ ಇಸಕೊಂಡದ್ದು ಎಲ್ರಿಗೂ ಗೊತ್ತಿದ್ದ ವಿಷ್ಯ. ಈಗ ಇಸಕೊಂಡ ಸಾಲ ಬಡ್ಡಿ, ಚಕ್ರಬಡ್ಡಿ ಸಮೇತ ಹತ್ತ ಲಕ್ಷ ದಾಟಿ ಹೋಗೇತಿ. ಮತ್ತ ಗೌಡರು ಇಲ್ಲೀತಂಕ ಸುಮ್ಮಕ ಇದ್ದದ್ದು ನಿನ್ನ ಕಷ್ಟಾ ನೋಡಿ. ಒಂದ ವರ್ಷ ಮಳೀ ಆಗಿಲ್ಲಂದೀ, ಮತ್ತೊಂದು ಸಲ ಮಗನ ಸಾಲಿ ಖರ್ಚ ಅಂದಿ, ಮತ್ತ ಬ್ಯಾರೆ ಬ್ಯಾರೆ ಸಮಸ್ಯೆ ಹೇಳಕೋತನ ಬಂದಿ. ಈಗ ಅದೆಲ್ಲ ನಡ್ಯಾಂಗಿಲ್ಲ, ಗೌಡರಿಗೂ ಹಣದ ಅವಶ್ಯಕತಾ ಐತಿ. ಅದಕ್ಕ ಎಲ್ಲಾ ರೊಕ್ಕ